ಕಲಘಟಗಿಯಿಂದಾ ಬೆಂಗಳ್ಳೂರಿಗೆ ಬಸ್ಸು ಓಡಿಸುವ ಬಗ್ಗೆ

(೪೪೧) ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಲಘಟಗಿಯಿಂದ ಬೆಂಗಳೂರಿಗೆ ನೇರವಾಗಿ ಬಸ್ಸು ಸೌಕರ್ಯ ನೀಡುವಲ್ಲಿ ಸರ್ಕಾರದವರು ಕ್ರಮತೆಗೆದುಕೊಳ್ಳುವರೆ ?

ಆ) ಕಲಘಟಗಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಡಿಪೋ ಮಂಜೂರು ಮಾಡಂವ ವಿಚಾರ ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ಸಚಿವರು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಈ ವೇಗಧೂತ ಸಾರಿಗೆ ಸೇವೆಯನ್ನು (ಎಕ್ಸ್‌ಪ್ರೆಸ್) ಹಳಿಯಾಳದಿಂದ ಕಲಘಟಗಿ ಮಾರ್ಗವಾಗಿ ಬೆಂಗಳೂರಿಗೆ ಕಾರ್ಯಾಚರಣೆ ನಡೆಸುತ್ತಿದೆ. ಈ ಸೇವೆಯು ಬೆಂಗಳೂರಿಗೆ ಹೋಗಬಯಸುವ ಕಲಘಟಗಿ ಪ್ರಯಾಣಿಕರನ್ನು ಸಮರ್ಪಕವಾಗಿ ಕೊಂಡೊಯ್ಯುತಿದೆ.

ಆ) ಇಲ್ಲ.

ಹಂಬ್ಬಳ್ಳಿ ಕೆ. ಎಂ. ಸಿ, ಆಸ್ಪತ್ರೆ ಸಲಹಾ ಸಮಿತಿ.

(೪೩೨) ಶ್ರೀ ಪಿ.ಸಿ. ಸಿದ್ದನಗೌಡ (ಕಲಘಲಗಿ),—ಮಾನ್ಯ ಆರೋಗ್ಯ ಮತ್ತು ಆಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಲಘಟಗಿ ಕ್ಷೇತ್ರದ (೧) ರಾಯನಾಳ (೨) ಕುರಡಿಕೇರಿ (೩) ತಬಕದ ಹೊನ್ನಳ್ಳಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೇ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಆಬ್ಕಾರಿ ಮಂತ್ರಿಗಳು).—

ಅ) ಕುರಡಿಕೇರಿ ಮತ್ತು ತಬಕದ ಹೊನ್ನಳ್ಳಿ ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯ ಘಟಕವನ್ನು ಮಂಜೂರು ಮಾಡಲು ಮನವಿ ಬಂದಿದೆ. ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಲು ಮನವಿಗಳು ಬಂದಿರುವುದಿಲ್ಲ. ಸರ್ಕಾರದ ನಿಬಂಧನೆಗಳನ್ನು ಸ್ಥಳೀಯರು ಪೂರೈಸಿದಲ್ಲಿ ಪ್ರಾಥಮಿಕ ಆರೋಗ್ಯ ಘಟಕವನ್ನು ಮಂಜೂರು ಮಾಡುವುದನ್ನು ಪರಿಶೀಲಿಸಲಾಗುವುದು.

ಆಸ್ಪತ್ರೆಯ ಬಗ್ಗೆ

(೧೫೫೫) ಶ್ರೀ ಗೋಪಾಲ ಮಂಕಂದ ಕಾನಡೆ (ಸಿರ್ಸಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೨ರಲ್ಲಿ ರಾಜ್ಯದಲ್ಲಿನ ಪ್ರತಿಯೊಂದು ಆಸ್ಪತ್ರೆಗೆ ಎಷ್ಟೆಷ್ಟು ಹಣ ನೀಡಲಾಗಿದೆ. ಹಾಗೂ ಈಗ ಎಷ್ಟು ಹಣ ಕೊಡುತ್ತಿದ್ದೀರಾ,

ಆ) ಅದೇ ಪ್ರಕಾರ ೧೯೮೨ರಲ್ಲಿ ಸಿದ್ದಾಪುರ ಮತ್ತು ಸಿರಸಿ ಆಸ್ಪತ್ರೆಗೆ ಎಷ್ಟು ಹಣ ನೀಡ ಲಾಗಿತ್ತು. ಹಾಗೂ ಈಗ ಎಷ್ಟು ನೀಡಲಾಗಿದೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿ ಒಟ್ಟು ೧೮೬೦ ಎಲ್ಲಾ ವಿಧವಾದ ಆಸ್ಪತ್ರೆಗಳಿದ್ದು ಪ್ರತಿಯೊಂದು ಆಸ್ಪತ್ರೆಗೆ ನೀಡಲಾದ ಹಣದ ವಿವರ ಕೊಡಲು ಕಷ್ಟವಾಗುತ್ತದೆ. ಆದರೆ ಈ ಕೆಳಕಂಡಂತೆ ಎಲ್ಲಾ ಬಾಬುಗಳಿಗೂ ಒಟ್ಟು ಹಣವನ್ನು ನೀಡಲಾಗಿದೆ.

	(ರೂಪಾಯಿ ಲಕ್ಷಗಳಲ್ಲಿ)
೧೯೮೨–೮೩	ರೂ. ೫೦೪೮–೯೭
೧೯೮೩–೮೪	ರೂ. ೮೭೮೪–೪೫